೧೯೫೯ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ಶಾಸನದ ೨೭ (೧)ನೇ ಕಲಮಿನ ಪ್ರಕಾರ ಸರ್ಕಾರದ ನಿಯಂತ್ರಣ ಹಾಗೂ ಮೇಲ್ವಿಚಾರಣೆಯಲ್ಲಿ ಸಹಕಾರ ಸಂಘಗಳಿಗೆ ವಾರ್ಷಿಕ ಸಾಮಾನ್ಯ ಸಭೆಗಳನ್ನು ನಡೆಸಲು ಅಥವಾ ಚುನಾವಣೆಯನ್ನು ರದ್ದುಪಡಿಸಲು ಅಥವಾ ಮುಂದೂಡುವ ಬಗ್ಗೆ ದಿನಾಂಕ. ೫–೨–೧೯೬೦ ರಂದು ಹೊರಡಿಸಿದ ಸಿ.ಎಂ.ಡಬ್ಲ್ಯೂ ೧೬೪ ಸಿ.ಎಲ್.ಎಂ.ನೇ ಕ್ರಮಾಂಕದ ಆದೇಶ.

ಅಧ್ಯಕ್ಷರು.— ಕಾಗದಪತ್ರಗಳನ್ನು ಸಭೆಯ ಮುಂದಿಡಲಾಯಿತು.

ಕರ್ನಾಟಕ ಪವರ್ ಕಾರ್ಪೋರೇಷನ್ನಿನ ಎಂಜಿನಿಯರುಗಳ ಸಂಘದವರು ಸ್ಟ್ರೈಕ್ ಮಾಡುವ ಬಗ್ಗೆ ಸರ್ಕಾರಕ್ಕೆ ನೋಟೀಸ್ ಕೊಟ್ಟಿರುವುದು.

† ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸದನ ನಡೆಯುತ್ತಿರುವಾಗ...

ಅಧ್ಯಕ್ಷರು.— ನಾನು ತಮ್ಮನ್ನು ಕರೆದಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಈ ತಿಂಗಳು ೨೪ನೇ ತಾರೀಖು ಕರ್ನಾಟಕ ಪವರ್ ಕಾರ್ಪೋರೇಷನ್ನಿನ ಪದವೀಧರ ಇಂಜಿನಿಯರುಗಳ ಸಂಘದವರು ಸ್ಟ್ರೈಕ್ ಮಾಡುವ ಬಗ್ಗೆ ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ಈ ಸಂದರ್ಭದಲ್ಲಿ ಈ ಕಾರ್ಪೋರೇಷನ್ನಿನ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಆಗತ್ಯಸೇವಾ ನಿರ್ವಹಣಾ ಕಾಯ್ದೆಯ ಅನ್ವಯ ಈ ಮುಷ್ಕರವನ್ನು ಬ್ಯಾನ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಇಂತಹ ಮಹತ್ವದ ವಿಚಾರದ ಬಗ್ಗೆ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಈ ತೀರ್ಮಾನವನ್ನು ಅವರು ತೆಗೆದುಕೊಂಡಿದ್ದಾರೆ. ಈ ಮುಷ್ಕರ ನಡೆದರೆ ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿ ಕೆ.ಪಿ.ಸಿ.ಗೆ ಲುಕ್ಸಾನು ಆಗುತ್ತದೆ ಮತ್ತು ೧೧ ಕೋಟಿ ಕೈಗಾರಿಕಾ ಕ್ಷೇತ್ರದಲ್ಲಿ ನಷ್ಟವಾಗುತ್ತದೆ, ಅಂದರೆ ಒಟ್ಟು ೧೨ ಕೋಟಿ ರೂಪಾಯಿ ಒಂದು ದಿವಸಕ್ಕೆ ಲುಕ್ಸಾನು ಆಗುತ್ತದೆ ಎಂಬ ಮಾತನ್ನು ಮ್ಯಾನೇಜಿಂಗ್ ಡೈರೆಕ್ಟರ್ ಅವರು ಹೇಳಿದ್ದಾರೆ. ಸದನ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ನಮ್ಮನ್ನು ಸಹಿತ ವಿಶ್ವಾಸಕ್ಕೆ ತೆಗೆದುಕೊಂಡು ಈ ಸದನದ ಮುಖಾಂತರ ಹೇಳಿಕೆಯನ್ನು ಕೊಡತಕ್ಕಂಥ ಸತ್‌ಸಂಪ್ರದಾಯ ನಮ್ಮಲ್ಲಿ ಇರುವುದು ತಮಗೂ ಸಹ ತಿಳಿದಿರುವ ವಿಷಯ. ದಯವಿಟ್ಟು ಮಾನ್ಯ ಅರ್ಥಮಂತ್ರಿಗಳು ಇಲ್ಲಿ ಇದ್ದಾರೆ, ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ. ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ವ್ಯವಸ್ಥಾಪಕ ನಿರ್ದೇಶಕರು ತಮ್ಮ ಹೇಳಿಕೆಯನ್ನು ಕೊಟ್ಟು ಸಭೆ ನಡೆಯುವಾಗ ಅಗೌರವ ಮಾಡಿದ್ದಾರೆ. ಸಂಬಂಧಪಟ್ಟ ಸಚಿವರಿಗೆ ಅವರ ಬಗ್ಗೆ ಎಷ್ಟೇ ವೈಯಕ್ತಿಕವಾದ ವಿಶ್ವಾಸ ಇರಬಹುದು. ಆದರೆ ಸಭೆಗೆ ಅಗೌರವ ಆಗಿರುವುದರಿಂದ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ಹೇಳುತ್ತೇನೆ. ಒಬ್ಬ ಅಧಿಕಾರಿ, ವ್ಯವಸ್ಥಾಪಕ ನಿರ್ದೇಶಕ ಈ ರೀತಿ ಹೇಳಿಕೆ ಕೊಡುವುದು ಸಚಿವರ ಗಮನಕ್ಕೆ ಬಂದಿಲ್ಲವೆ ? ಸದನ ನಡೆಯುವಾಗ ಈ ರೀತಿ ಹೇಳಿಕೆ ಕೊಡುವುದು ಸಭೆಗೆ ಅಗೌರವ ಮಾಡಿದಂತೆ ನೀತಿಯಾಗಿದೆ. ಆದ್ದರಿಂದ ನಾನು ಮಾನ್ಯ ಲೋಕೋಪಯೋಗಿ ಸಚಿವರು, ವಿದ್ಯುಚ್ಛಕ್ತಿ ಸಚಿವರನ್ನು ಈ ಸಭೆಯ ಮುಖಾಂತರ ಕೇಳಿಕೊಳ್ಳುತ್ತೇನೆ. ಅಧಿಕಾರಿಗಳು ಮಾಡಿರುವ ಹೇಳಿಕೆಯಿಂದ ಇಡೀ ಸಭೆಗೇ ಅಗೌರವವಾಗಿದೆ. ಆದ್ದರಿಂದ ತಾವು ಕೂಡಲೇ ರಾಜೀನಾಮೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ...

ಶ್ರೀ ಪಿ. ಜಿ. ಆರ್. ಸಿಂಧ್ಯ.— ತಾವು ಏನಾದರೂ ಹೇಳಿಕೆ ಕೊಡಿ. ನಮ್ಮನ್ನು ಸಹ ವಿಶ್ವಾಸಕ್ಕೆ ತೆಗೆದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್.— ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು ಒಬ್ಬ ಅಧಿಕಾರಿ ಹೀಗೆ ಏಕಾಏಕಿ ಶೀರ್ಮಾನ ಕೊಡತಕ್ಕದ್ದು ಈ ಸಭೆಗೆ ಮಾಡಿರುವ ಅಗೌರವ. ಸರ್ಕಾರಕ್ಕೆ ಅಗೌರವ ಎಂದು ನಾನು ಹೇಳುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಬಿ. ಬಸವಲಿಂಗಪ್ಪ. — ತಾವು ಹೇಳಿದ್ದುದು ಸರಿ. ಒಂದು ವಿಷಯ ನನಗೆ ಅರ್ಥವಾಗಲಿಲ್ಲ. ರಾಜೀನಾಮೆ ಕೊಡಿ, ರಾಜೀನಾಮೆ ಕೊಡಿ ಎಂದು ಹೇಳುತ್ತೀರಿ. ನಾವು ಊಟಕ್ಕೆ ಹೋದರೂ ರಾಜೀನಾಮೆ ಕೊಡಿ, ಏತಕ್ಕೆ ಊಟಕ್ಕೆ ಹೋಗಿದ್ದರು ಎಂದು ಕೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್.— ನಾವು ರಾಜೀನಾಮೆ ಕೊಡಿ ಎಂದು ಹೇಳತಕ್ಕದ್ದು ಇದು ಮಂತ್ರಿಗಳ ಗಮನಕ್ಕೆ ಬಂದಿಲ್ಲವೇ ? ಸಭೆ ನಡೆಯುವಾಗ ಅವರು ಈ ರೀತಿ ಹೇಳಿಕೆ ಕೊಟ್ಟಿರುವುದು ಸಭೆಗೆ ಅಗೌರವ ಮಾಡಿದಂತಾಗುತ್ತದೆ. ಆದಕ್ಕಾಗಿ ರಾಜೀನಾಮೆ ಕೊಡಬೇಕು ಎಂದು ಕೇಳಿದ್ದುದು.

ಶ್ರೀ ಬಿ. ಬಸವಲಿಂಗಪ್ಪ.— ಕೇಳುವ ರೀತಿಯಲ್ಲಿ ಕೇಳಿ. ಸುಮ್ಮನೆ ರಾಜೀನಾಮೆ ಕೊಡಿ ಎಂದರೆ ಹೇಗೆ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ನಮ್ಮನ್ನು ಸಹಿತ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇದರ ಬಗ್ಗೆ ಸ್ಪಷ್ಟವಾದ ಒಂದು ಹೇಳಿಕೆ ಬೇಕು.

ಅಧ್ಯಕ್ಷರು.— ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ. ಸನ್ಮಾನ್ಯ ಸದಸ್ಯರು ಎತ್ತಿರತಕ್ಕ ಪ್ರಶ್ನೆಗೆ ಈ ಸಭೆ ಏಳುವುದರೊಳಗಾಗಿ ಒಂದು ಸ್ಟೇಟ್‌ಮೆಂಟ್ ಮಾಡುತ್ತೇನೆ. ಈಗ ತಾವು ಮುಂದಿನ ವಿಷಯಕ್ಕೆ ಹೋಗಬಹುದು.

ಶ್ರೀ ಸಿ. ಬೈರೇಗೌಡ —ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನಿವೇದನೆ ಮಾಡಿಕೊಳ್ಳುವುದೇನೆಂದರೆ, ನಿನ್ನೆಯ ನನ್ನ ಕಾಲಿಂಗ್ ಅಟೆನ್‌ಷನ್ ನೋಟೀಸಿಗೆ, ಮಾನ್ಯ ಮಂತ್ರಿಗಳ ವಿವರಣೆ ಕೊಡಬೇಕಾಗಿತ್ತು. ವಿವರಣೆ ಎನ್ನುವ ಪದ ಉಪಯೋಗಿಸಬೇಕೋ ಏನೋ ಗೊತ್ತಿಲ್ಲ- ನಾನು ಕೊಟ್ಟಂಥ ಗಮನ ಸೆಳೆಯುವ ಸೂಚನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ಇದು ನಿನ್ನೆಯ ದಿವಸ ಸಾಯಂಕಾಲ ನನ್ನ ಗವಂನಕ್ಕೆ ಬಂದಿದೆ, ನಾನೇ ನಡೆದುಕೊಂಡು ಹೋಗಿ ವಿಚಾರ ತಿಳಿದುಕೊಂಡು ಬರಬೇಕಾಗಿತ್ತದೆಯೇ ಎಂದು, ಕೇಳಿದರು. ಈಗ ರೂಲ್ಸ್‌ನಲ್ಲಿ ಏನು ಹೇಳುತ್ತದೆ ಎಂದರೆ, ನಾನು ಸಂಬಂಧಪಟ್ಟ ರೂಲ್ಸ್‌ನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

> "A member may with the previous permission of the Speaker call the attention of the Minister to any matter of urgent public importance and the Minister may make a brief statement or ask for time to make a statement at a later hour or date."

ವಿಧಿಯಲ್ಲಿ ಸ್ಪಷ್ಟವಾಗಿದೆ. ಆದ್ದರಿಂದ ನಿನ್ನ ಮಂತ್ರಿಗಳು ಹೇಳಿರತಕ್ಕಂಥದ್ದು, ಇದುವರೆಗೂ ನನ್ನ ಗಮನಕ್ಕೆ ಬಂದಿಲ್ಲ, ಮೊನ್ನೆ ಸಾಯಂಕಾಲ ಗವಂನಕ್ಕೆ ಬಂದಿದೆ ಎಂದು ಅವರ ಉತ್ತರದಲ್ಲಿ ಹೇಳಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ತಮ್ಮ ರೂಲ್ಸ್ ಪ್ರಕಾರ ನಿನ್ನೆದಿನ ತಾವು ನನಗೆ ಈ ವಿಚಾರದಲ್ಲಿ ಮಾನ್ಯಮಂತ್ರಿಗಳ ಗಮನ ಸೆಳೆಯುವುದಕ್ಕೆ ಅವಕಾಶ ವನ್ನು ಕೊಟ್ಟಿದ್ದೀರಿ. ಮೊನ್ನೆ ಸಾಯಂಕಾಲ ಇದು ಅವರ ಗವನಕ್ಕೆ ಬಂದಮೇಲೆ ನಿನ್ನೆದಿನ ಅವರು ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕಾಗಿತ್ತು. ಇದು ನನ್ನಗವನಕ್ಕೆ ಬಂದಿದೆ ಎಂದು ಮಂತ್ರಿಗಳು ಹೇಳಿದ್ದಾರೆ. ಅವರಿಗೆ ಮೊನ್ನೆಯಾದರೂ ಗವನಕ್ಕೆ ಬಂದಿದೆ. ಈ ವಿಧಿಯ ಪ್ರಕಾರ ನಿನ್ನೆದಿವಸ ಅವರು ಹೇಳಿಕೆ ಕೊಡ ಬೇಕಾಗಿತ್ತು ನಿನ್ನೆದಿವಸ ಕೊಡಲಿಲ್ಲ. ಇವತ್ತು ಅಥವಾ ನಾಳೆ ಅವರು ಹೇಳಿಕೆ ಕೊಡುವುದಕ್ಕೆ, ತಾವು ಮಾನ್ಯ ಮಂತ್ರಿಗಳಿಗೆ ಸೂಚನೆ ಕೊಡಬೇಕು, ಇಲ್ಲದಿದ್ದರೆ, ಒಬ್ಬ ಸದಸ್ಯರು ಹಕ್ಕಿಗೆ ಚ್ಯುತಿ ಬಂದ ಹಾಗೆ ಆಗುತ್ತದೆ. ಈ ರೀತಿ ಚ್ಯುತಿ ಬರತಕ್ಕಂಥ ಕೆಲಸ, ತಮ್ಮ ಆ ಸ್ಥಾನದ ಅವಧಿಯಲ್ಲಿ ಆಗಬಾರದು ಎಂಬುದು ನನ್ನ ಭಿನ್ನಹ. ಆದ್ದರಿಂದ ಯಾವಾಗ ಉತ್ತರ ಕೊಡುತ್ತಾರೆ, ಅಥವಾ ಉತ್ತರವನ್ನು ತರಿಸಿಕೊಡುತ್ತಾರೆ ಎನ್ನುವುದನ್ನು ಹೇಳಿಬೇಕು.

ಅಧ್ಯಕ್ಷರು.—ನಿನ್ನೆ ಮಾನ್ಯ ಮಂತ್ರಿಗಳು ಇದು ನನ್ನ ಗಮನಕ್ಕೆ ಬಂದಿರುತ್ತದೆ, ನನ್ನ ಜೊತೆಗೆ ನೀವೂ ಸಹಕರಿಸಿ, ಇದನ್ನು ಸುಧಾರಣೆ ಮಾಡೋಣ ಎಂದು ಹೇಳಿದರು. ಆದ್ದರಿಂದ, ಗವನಕ್ಕೆ ಬರಲಿಲ್ಲ, ಎನ್ನುವುದು ಇಲ್ಲಿ ಮುಖ್ಯವಲ್ಲ. ಆಲ್ಲಿ ಹಣ ಲ್ಯಾಪ್ಸ್ ಆಗುತ್ತಿದೆ ಅದನ್ನು ತಡೆಗಟ್ಟಿ, ಆದನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸೋಣ ಅದಕ್ಕೆ ನಿಮ್ಮ ಸಹಕಾರ ಕೊಡಿ ಎನ್ನುವುದು ಅವರ ಲೇಟೆಸ್ಟ್ ಹೇಳಿಕೆ. ನಿಮ್ಮ ಪ್ರಶ್ನೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ನನ್ನ ಗವನದಲ್ಲಿ ಬಂದಿರುತ್ತದ, ನಾನು ಸರಿ ಮಾಡುತ್ತೇನೆ. ಅದಕ್ಕೆ ನಿಮ್ಮ ಸಹಕಾರ ಕೊಡಿ ಎಂದು ಕೇಳಿದ್ದಾರೆ.

ಶ್ರೀ ಸಿ. ಬೈರೇಗೌಡ.—ಅದಕ್ಕೆ ಬೇರೆ ಅರ್ಥ ಇದೆ. ನನ್ನ ಜಿಲ್ಲೆಯ ಜಿಲ್ಲಾ ಪರಿಷತ್ತಿನಲ್ಲಿ ಮಾರ್ಚ್ ೩೧ರೊಳಗೆ, ಸಂಪೂರ್ಣರು ಒಂದು ಕೋಟಿ ರೂಪಾಯಿ ಹಣ ಲ್ಯಾಪ್ಸ್ ಆಗತಕ್ಕ ಸಂದರ್ಭ ಇದೆ. ಇದಕ್ಕೆ ಸರ್ಕಾರದವರು ಪರ್ಯಾಯ ವ್ಯವಸ್ಥೆ ಮಾಡಬೇಕಾಗುತ್ತದೆ. ಲ್ಯಾಪ್ಸ್ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಹೇಳಿದೆ.

ಅಧ್ಯಕ್ಷರು.—ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿ. ಬೈರೇಗೌಡ.—ಆ ಉತ್ತರ ಸಮರ್ಪಕವಾಗಿಲ್ಲ.

ಅಧ್ಯಕ್ಷರು.—ಉತ್ತರ ಸಮರ್ಪಕ ಅಥವಾ ಅಸಮರ್ಪಕ, that is subjective level of our opinion. ನಿಮಗೆ ಸಂಪೂರ್ಣವಾಗಿ, ಸಮರ್ಪಕವಾದ ಉತ್ತರವನ್ನು ಕೊಡಿ ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ. ನೀವು ಸಮರ್ಪಕವಾದ ಉತ್ತರವನ್ನು ಕೊಡಿ ಎಂದು ಹೇಳಿ. ನನಗೆ ತಿಳಿದಹಾಗೆ ಲ್ಯಾಪ್ಸ್ ಆಗದರೀತಿಯಲ್ಲಿ ನೋಡುತ್ತೇನೆಂದು ಹೇಳಿದ್ದಾರೆ ಇದಕ್ಕೆ ನೀವೂ ಸಹಕಾರ ಕೊಡಿ.

ಶ್ರೀ ಸಿ. ಬೈರೇಗೌಡ.—ನಮ್ಮ ಸಹಕಾರ ಅವರಿಗೆ ಬೇಕಾಗಿಲ್ಲ. ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅವರು ಇದನ್ನು ಬೇರೆ ಅರ್ಥದಲ್ಲಿ ಹೇಳುತ್ತಿದ್ದಾರೆ. ನಿನ್ನೆ ಅವರು ಸೂಕ್ಷ್ಮವಾಗಿ ಹೇಳಿದ್ದಾರೆ. ಅಲ್ಲಿರತಕ್ಕ ಅಧ್ಯಕ್ಷರಿಗೆ ಬಹುಮತ ಇಲ್ಲ. ಅವರನ್ನು ತೆಗೆಯುವುದಕ್ಕೆ ನಿಮ್ಮ ಸಹಕಾರ ಕೊಡಿ ಎಂದು ಹೇಳುತ್ತಿದ್ದಾರೆ. ಸಹಕಾರ ಕೊಡುತ್ತೇವೊ ಇಲ್ಲವೋ, ಅದು ಬೇರೆ ವಿಚಾರ. ಆದರೆ ಅಲ್ಲಿ ನಡೆದಿರತಕ್ಕ ವಿಚಾರ, ಹಣ ಲ್ಯಾಪ್ಸ್ ಆಗತಕ್ಕ ವಿಚಾರ ಇದೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಸರಿ. ಈಗ ಗಮನ ಸೆಳೆಯುವ ಸೂಚನೆ. ಮೊದಲನೆಯದು ಶ್ರೀ ಎಂ. ಶಂಕರರೆಡ್ಡಿ ಅವರು. ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನನಗೆ ಪತ್ರ ಬರೆದಿದ್ದಾರೆ. ಇವತ್ತು ಅವರಿಗೆ ಕಾರ್ಯಭಾರದ ಒತ್ತಡದಿಂದ ಸದನಕ್ಕೆ ಬರುವುದು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದಾರೆ. ಆದ್ದರಿಂದ ಈ ವಿಷಯವನ್ನು ನಾಳೆ ತೆಗೆದುಕೊಳ್ಳೋಣ. ಈಗ. ಮಾನ್ಯ ಎಂ.ಪಿ. ವೆಂಕಟೇಶ್ ಅವರು, ತಮ್ಮ ವಿಷಯದ ಬಗ್ಗೆ ಗಮನ ಸೆಳೆಯಿರಿ.

ಗಮನ ಸೆಳೆಯುವ ಸೂಚನೆ

1. ಗಡಿ ತಾಲ್ಲೂಕಾದ ಹೆಗ್ಗಡದೇವನ ಕೋಟೆ ಮೂಲಕ ಕೇರಳರಾಜ್ಯಕ್ಕೆ ಪ್ರತಿದಿನ ಸಾವಿರಾರು ಆರೋಗ್ಯ ಮತ್ತು ದೃಢಕಾಯವಾಗಿರುವ ಜಾನುವಾರುಗಳ ಸಾಗಾಣಿಕೆ

ಶ್ರೀ ಎಂ. ಪಿ. ವೆಂಕಟೇಶ್ (ಹೆಗಡದೇವನ ಕೋಟೆ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಗಡಿ ತಾಲ್ಲೂಕಾದ ಹೆಗ್ಗಡದೇವನ ಕೋಟೆ ಮೂಲಕ ಕೇರಳ ರಾಜ್ಯಕ್ಕೆ ಪ್ರತಿದಿನ ಸಾವಿರಾರು ಆರೋಗ್ಯ ಮತ್ತು ದೃಢಕಾಯವಾಗಿರುವ ಎತ್ತು, ಹಸು, ಎಮ್ಮೆ, ಮತ್ತು ಕರುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿರುವುದರಿಂದ ಸಣ್ಣ ಮತ್ತು ಅತಿಸಣ್ಣ ರೈತರಿಗೆ ತೊಂದರೆಯಾಗುತ್ತಿರುವುದರ ಬಗ್ಗೆ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನೆ ಖಾತೆಗಳ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ, ಪಶುಸಂಗೋಪನೆ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡ ಲಿಖಿತ ಹೇಳಿಕೆಯನ್ನು ಕೊಡಲು ಬಯಸುತ್ತೇನೆ.

ಕರ್ನಾಟಕ ಗಡಿ ಪ್ರದೇಶದಿಂದ ಕೇರಳಕ್ಕೆ ಜಾನುವಾರುಗಳನ್ನು ಸಾಗಿಸುವುದನ್ನು ಪ್ರತಿಬಂಧಿಸುವ ಬಗ್ಗೆ ಕಾಯ್ದೆ ಅಥವಾ ಕಾನೂನು ಇರುವುದಿಲ್ಲ.

ಜಾನುವಾರುಗಳಿಗೆ ಸಾಂಕ್ರಾಮಿಕ ರೋಗ ಬಂದಲ್ಲಿ ಮಾತ್ರ ಅದರ ನಿಯಂತ್ರಣಕ್ಕಾಗಿ ಜಾನುವಾರಗಳ ಸಾಗಾಣಿಕೆಯನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ನಿರ್ಭಂದಿಸಲು ಕಾನೂನಿನಲ್ಲಿ ಅವಕಾಶವಿದೆ.

ಕೇರಳ ರಾಜ್ಯದಲ್ಲಿ ಹಸುಗಳ ವಧೆಯ ಬಗ್ಗೆ ಪ್ರತಿಬಂಧಕ ಕಾಯ್ದೆಯು ಜಾರಿಯಲ್ಲಿಲ್ಲ (ಇಡೀ ದೇಶದಲ್ಲಿ ಸದರಿ ಕಾಯ್ದೆಯು ಜಾರಿಯಲ್ಲಿದ್ದು, ಈ ಕಾಯ್ದೆಯು ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಜಾರಿಯಲ್ಲಿಲ್ಲ) ಆದ್ದರಿಂದ ಪೂರಾಟಗಾರರು ಕರ್ನಾಟಕದಲ್ಲಿನ ಜಾನುವಾರುಗಳನ್ನು ಮಾಲೀಕರಿಂದ ಲಾಭದಾಯಕ ಬೆಲೆಗೆ ಕೊಂಡು ಕೇರಳ ರಾಜ್ಯಕ್ಕೆ ಸಾಗಿಸಬಹುದಾಗಿದೆ,